**ಪಾಠ–5** **ಮೇ 5–12**

# ಪರಲೋಕದ ಗುಡಾರದಲ್ಲಿ ಕ್ರಿಸ್ತನು

**ಸಬ್ಬತ್ತಿನ ಮಧ್ಯಾಹ್ನ :**

**ಈ ವಾರದ ಅಧ್ಯಯನಕ್ಕಾಗಿ :** ರೋಮ 8:3, ಯೋಹಾನ 1:29, ಪ್ರಕಟಣೆ 5:12, ಇಬ್ರಿಯರಿಗೆ 7:1–28, 9:11–15, ಯಾಜಕಕಾಂಡ 16:13, ಇಬ್ರಿಯರಿಗೆ 9:20–23.

***ಸ್ಮರಣ ವಾಕ್ಯ :*** **ಫಿಲಿಪ್ಪಿ 2, 9, 10 ಪರಲೋಕದ ಗುಡಾರದಲ್ಲಿ ಯೇಸುವಿನ ಕುರಿತಾಗಿ ಇಬ್ರಿಯರ ಪುಸ್ತಕ ಹೀಗೆ ಹೇಳುತ್ತದೆ. (ಇಬ್ರಿಯರಿಗೆ 6:20).**

ಸತ್ಯವೇದವು ಅದರಲ್ಲೂ ವಿಶೇಷವಾಗಿ ಹೊಸ ಒಡಂಬಡಿಕೆಯು ಪರಲೋಕದಲ್ಲಿ ಮಹಾ ಯಾಜಕನಾಗಿ ಯೇಸುವಿನ ಪಾತ್ರವನ್ನು ಮತ್ತು ಭೂಲೋಕದಲ್ಲಿ ನಮ್ಮ ಪರವಾಗಿ ಆತನು ಮಾಡಿದ ತ್ಯಾಗದ ಕುರಿತಾಗಿ ಬಹಳ ಸ್ಪಷ್ಟವಾಗಿ ತಿಳಿಸುತ್ತದೆ. (ಇಬ್ರಿಯರಿಗೆ 10:12).

ಪರಲೋಕದಲ್ಲಿ ಯೇಸುವು ನಮ್ಮ ಪರವಾಗಿ ಮಾಡುವ ಸೇವೆಯ ಕುರಿತಾಗಿ ಕಲಿಯೋಣ. ಅಲ್ಲಿ ಆತನು ತನ್ನ ಜನರ ಪರವಾಗಿ ಮಾಡುವ ಮದ್ಯಸ್ಥಿಕೆಯ ಸೇವೆಯು ಅವರನ್ನು ತನ್ನ ಎರಡನೇಯ ಬರೋಣಕ್ಕೆ ಸಿದ್ದಮಾಡಲು ಬಹಳ ಮುಖ್ಯವಾದದ್ದು. ಆದ್ದರಿಂದ, ನಮಗೆ ಈ ಅಮೂಲ್ಯವಾದ ಎಚ್ಚರಿಕೆಯನ್ನು ನೀಡಲಾಗಿದೆ. ಪರಲೋಕ ಗುಡಾರ ಮತ್ತು ಪರಿಶೀಲನೆ ತೀರ್ಪು ಈ ಎರಡು ಅಂಶಗಳ ಕುರಿತಾಗಿ ದೇವರ ಮಕ್ಕಳು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು. ಯೇಸುವು ಅವರ ಪರವಾಗಿ ವಹಿಸುವ ಮಧ್ಯಸ್ಥಿಕೆಯ ಕುರಿತಾಗಿ ಅವರಿಗೆ ಹೆಚ್ಚಿನ ಅರಿವು ಇರಬೇಕು. ಇಲ್ಲದೆ ಹೋದರೆ ದೇವರು ಅವರಿಗೆ ವಹಿಸುವ ಹೆಚ್ಚಿನ ಜವಾಬ್ದಾರಿಯನ್ನು ಅವರು ತಿಳಿದುಕೊಳ್ಳಲು ಮತ್ತು ಅವರ ನಂಬಿಕೆಯನ್ನು ತೋರಿಸಲು ಬಹಳ ಕಷ್ಟವಾಗುತ್ತದೆ. **ಎಲೆನ್ ಜಿ ವೈಟ್ ಮಹಾ ಹೋರಾಟ. ಪುಟ 488**.

ಯೇಸುವು ಪರಲೋಕ ಗುಡಾರದಲ್ಲಿ ನಮಗಾಗಿ ಏನು ಮಾಡುತ್ತಿದ್ದಾನೆ, ಮತ್ತು ಅದು ಕೊನೆಯ ಕಾಲದಲ್ಲಿ ಜೀವಿಸುವ ನಮಗೆ ಹೇಗೆ ಪ್ರಾಮುಖ್ಯವಾಗುತ್ತದೆ.?

**ಈ ವಾರದ ಪಾಠವನ್ನು ಮೇ 5 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ಶ್ರೇಷ್ಠವಾದ ಬಲಿದಾನ

ಯೇಸುವು ಸಲ್ಲಿಸಿದ ಶ್ರೇಷ್ಠವಾದ ಬಲಿದಾನದ ಕುರಿತಾಗಿ ಅಧ್ಯಯನ ಮಾಡುವುದು ದೇವರ ಜನರನ್ನು ಕೊನೆಯ ಕಾಲಕ್ಕಾಗಿ ಸಿದ್ದತೆ ಮಾಡುತ್ತದೆ. ಅನೇಕ ಬಾರಿ ಜನರು ಗುರಿಯನ್ನು ತಮ್ಮ ಮುಂದಕ್ಕೆ ತೆಗೆದುಕೊಂಡು ಹೋಗಿದ್ದೇವೆ ಎಂದು ಭಾವಿಸುತ್ತಾರೆ ಆದರೆ ಅವರ ಗುರಿಯು ಅವರ ಹಿಂದೆ ಉಳಿದಿದೆ. ನಾವು ಕಲ್ವಾರಿ ಎಂಬ ಗುರಿಯ ಕುರಿತಾಗಿ ಮಾತನಾಡುತ್ತಿದ್ದೇವೆ, ಕಲ್ವಾರಿ ಎಂಬ ಗುರಿಯನ್ನು ಯೇಸುವು ನಮ್ಮ ಪರವಾಗಿ ಮುಟ್ಟಿದ್ದಾನೆ.ಇದರಿಂದ ನಮ್ಮ ಮುಂದಿನ ಗುರಿಯು ಬಹಳ ಸುಲಭವಾಗುತ್ತದೆ.

**ರೋಮ 8:3, 1 ತಿಮೋಥಿ 1:17, 6:16, 1 ಕೊರಿಂಥ 15:53 ನ್ನು ಓದಿರಿ. ದೇವರು ಯಾಕೆ ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು?**

ದೇವರು ಪಾಪವನ್ನು ಖಂಡಿಸಲು ಯೇಸುವನ್ನು ಪಾಪ ಪರಿಹಾರ ಬಲಿಯಾಗಿ ಈ ಲೋಕಕ್ಕೆ ಕಳುಹಿಸಿಕೊಟ್ಟನು. ಇದರ ಅರ್ಥವೇನು? ಅಮರತ್ವವನ್ನು ಹೊಂದಿರುವ ದೇವರು ಮರಣವನ್ನು ಅನುಭವಿಸಲು ಸಾಧ್ಯವಿಲ್ಲ. ಆದ್ದರಿಂದ ದೇವರು ಮನುಷ್ಯನಾದನು. ನಮ್ಮ ಮರ್ತ್ಯವಾದ ಸ್ಥಿತಿಯನ್ನು ಆತನು ಪಡೆದುಕೊಂಡು ನಮ್ಮ ಪರವಾಗಿ ಆತನು ನಮ್ಮ ಮರಣವನ್ನು ಅನುಭವಿಸಿದನು.

ದೈವಿಕ ಮತ್ತು ದೇವರ ಸ್ವಭಾವದ ಹೊರೆತಾಗಿಯೂ ಯೇಸುವು ಮಾನವನ ಸ್ವರೂಪವನ್ನು ಧರಿಸಿದನು ಮತ್ತು ಆತನು ತನ್ನನ್ನು ತಾನು ತಗ್ಗಿಸಿಕೊಂಡು ಶಿಲುಬೆಯ ಮೇಲೆ ಮರಣದವೆರೆಗೂ ಕೂಡ ವಿಧೇಯನಾದನು (ಫಿಲಿಪ್ಪಿ 2:6–8). ದೇವರಿಗೆ ಮಾತ್ರ ತಿಳಿದಿರುವ ಪ್ರಕಾರ ಯೇಸುವು ಶಿಲುಬೆಯ ಮೇಲೆ ಮರಣ ಹೊಂದಿದಾಗ ಆತನ ದೈವತ್ವವು ಸಾವನ್ನು ಅನುಭವಿಸಲಿಲ್ಲ. ಮಾನವ ಜ್ಞಾನಕ್ಕೆ ಎಟುಕದ ರೀತಿಯಲ್ಲಿ ಯೇಸುವಿನ ದೈವತ್ವವು ಮರಿಯಳ ಒಂಭತ್ತು ತಿಂಗಳ ಗರ್ಭದ ಸಮಯದಲ್ಲಿ ಮತ್ತು ಆತನು ಸಮಾಧಿಯಲ್ಲಿ ಇದ್ದ ಸಮಯದಲ್ಲಿ ಕದಲದಂತೆ ಇತ್ತು, ಹಾಗೂ ಯೇಸುವು ತನ್ನ ಸೇವೆಯ ಸಮಯದಲ್ಲಿ ಮತ್ತು ಭೂಲೋಕದಲ್ಲಿರುವಾಗ ತನ್ನ ದೈವತ್ವವನ್ನು ತನ್ನ ಸಹಾಯಕ್ಕಾಗಿ ಉಪಯೋಗಿಸಲಿಲ್ಲ.

**ಲೂಕ 9:22 ನ್ನು ಓದಿರಿ. ಯೇಸುವಿನ ಮರಣದ ಅಂತರ್ಯದ ಕುರಿತಾಗಿ ಏನು ಹೇಳುತ್ತದೆ?**

________________________________________

________________________________________

ಯೇಸುವು ಮರಣವನ್ನು ಹೊಂದಲು ಹುಟ್ಟಿದನು. ಆತನು ತಿರಸ್ಕಾರ, ಅವಮಾನ, ಹೊಡೆತ ಮತ್ತು ಹೃದಯವು ಒಡೆಯುವ ಅನುಭವದ ಶಿಲುಬೆಯ ಮರಣವನ್ನು ಯಾವಾಗಲೂ ಕೂಡ ತನ್ನ ಹತ್ತಿರವೇ ಇಟ್ಟುಕೊಂಡಿದ್ದನು ನಿತ್ಯತ್ವದ ಒಂದು ಘಳಿಗೆಯು ಕೂಡ ಆ ಆಲೋಚನೆಯು ಆತನಿಂದ ದೂರವಾಗಿರಲಿಲ್ಲ. ಇದು ವ್ಯತ್ಯಾಸವಿಲ್ಲದ ಪ್ರೀತಿ, ಇದನ್ನು ನಾವು ಈ ಹಿಂದೆ ಅನುಭವಿಸಿಲ್ಲ ಮತ್ತು ಅದನ್ನು ನಾವು ಸಂಪೂರ್ಣವಾಗಿ ಅರ್ಥಮಾಡಿಕೊಂಡಿಲ್ಲ.

**ಇಂತಹ ಪ್ರೀತಿಯನ್ನು ಕಂಡು ನಾವು ಏನು ಮಾಡುವುದು ಅದಕ್ಕೆನಂಬಿಕೆ ಮತ್ತು ವಿಧೆಯತೆಯಲ್ಲಿ ಅಡ್ಡಬಿದ್ದು ಸಾಷ್ಟಾಂಗ ನಮಸ್ಕಾರ ಮಾಡುವುದು ಮಾತ್ರ**

**ನಮಗೆ ಸಾಧ್ಯವಾಗುತ್ತದೆ? ಇಡೀ ಶಿಲುಬೆಯ ಅನುಭವವು ಮಾನವನ ಅರ್ಹತೆಯ ಕುರಿತಾಗಿ ಏನು ಹೇಳುತ್ತದೆ?**

**ಸೋಮವಾರ**

## ದೇವರ ಕುರಿಮರಿ

**ಯೋಹಾನ 1:29, ಪ್ರಕಟಣೆ 5:12, 13:8 ನ್ನು ಓದಿರಿ. ಈ ಎಲ್ಲಾ ವಚನಗಳು ಸಾಮಾನ್ಯವಾಗಿ ತಿಳಿಸುವ ಚಿತ್ರಣವು ಯಾವುದು ಮತ್ತು ರಕ್ಷಣೆಯ ಯೋಜನೆಯನ್ನು ಅರ್ಥ ಮಾಡಿಕೊಳ್ಳಲು ಈ ಚಿತ್ರಣವು ನಮಗೆ ಹೇಗೆ ಸಹಾಯ ಮಾಡುತ್ತದೆ?**

________________________________________

________________________________________

ಸ್ನಾನಿಕನಾದ ಯೋಹಾನನು ಯೇಸುವನ್ನು ದೇವರ ಕುರಿಮರಿ ಎಂದು ಕರೆದಾಗ ಆತನು ಯಾವುದೇ ತಪ್ಪಿಲ್ಲದೆ ಗುಡಾರ ಸೇವೆಯ ಕುರಿತಾಗಿ ಹೇಳುತ್ತಿದ್ದನು. ಮುಂದೆ ನೇರವಾಗಿ ಎಲ್ಲಾ ಕುರಿಮರಿಗಳ ಪಾಪದ ಪರವಾಗಿ ಯೇಸುವು ಸಲ್ಲಿಸುವ ವಿಶೇಷವಾದ ಮತ್ತು ಶ್ರೇಷ್ಠವಾದ ಬಲಿದಾನದ (ಗುಡಾರದ ಸೇವೆಯಲ್ಲಿ ನಡೆಯುವ ಎಲ್ಲಾ ಆಚರಣೆಗಳ) ಕುರಿತಾಗಿ ಹೇಳುತ್ತಿದ್ದಾನೆ. ನಾಲ್ಕು ಸುವಾರ್ತೆಗಳು ಅವು ಏನೇ ಭೋಧಿಸಿದರೂ ಕೂಡ ಲೋಕದ ಪಾಪವನ್ನು ತೆಗೆದುಹಾಕಲು ಯೇಸುವು ದೇವರ ಕುರಿಮರಿಯಾಗಿ ಸಲ್ಲಿಸಿದ ಬಲಿದಾನದ ಕುರಿತಾಗಿ ಹೇಳುತ್ತವೆ.

ಆದರೆ, ಯೇಸುವಿನ ಕಥೆ ಮತ್ತು ರಕ್ಷಣೆಯಲ್ಲಿ ಆತನ ಪಾತ್ರವು ಸುವಾರ್ತೆಯಲ್ಲಿ ಮಾತ್ರ ಅಂತ್ಯವಾಗುವುದಿಲ್ಲ ಇದರಲ್ಲಿ ಆತನ ಮರಣ ಮತ್ತು ಪುನರುತ್ಥಾನಾವು ಕೂಡ ಸೇರಿದೆ.

ಆರಂಭದಿಂದಲೂ ಕೂಡ ಇಬ್ರಿಯರ ಪುಸ್ತಕವು ಯೇಸುವು ಈ ಲೋಕದಲ್ಲಿ ದೇವರ ಕುರಿಮರಿಯಾಗಿ ಬಲಿದಾನವನ್ನು ಮಾಡಿದ ನಂತರ ಪರಲೋಕದ ಗುಡಾರದಲ್ಲಿ ಆತನು ಸಲ್ಲಿಸುವ ಸೇವೆಯ ಕುರಿತಾಗಿ ತಿಳಿಸುತ್ತದೆ. ಶಿಲುಬೆಯ

ನಂತರ ಈ ಪಾತ್ರದಲ್ಲಿ ಮೊದಲ ಬಾರಿಗೆ ಆತನನ್ನು ಪರಿಚಯಿಸುವ ವಿಧಾನದಲ್ಲಿ (ಇಬ್ರಿಯರಿಗೆ 1:3), ಮತ್ತು ಮುಂದಿನ ಅಧ್ಯಾಯಗಳಲ್ಲಿ ಆತನ ಪಾತ್ರವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ವಿವರಿಸುತ್ತದೆ. ಪರಲೋಕದ ಗುಡಾರದಲ್ಲಿ ಆತನು ವಹಿಸಿದ ಮಧ್ಯಸ್ಥಿಕೆಯ ಪಾತ್ರವನ್ನು ಇಬ್ರಿಯರಿಗೆ 7:1–28 ರಲ್ಲಿ ಸಂಪೂರ್ಣವಾಗಿ ವಿವರಿಸಲಾಗಿದೆ.

**ಇಬ್ರಿಯರಿಗೆ 7:11–28 ನ್ನು ಓದಿರಿ. ಯೇಸುವಿನ ಕುರಿತಾಗಿ ಇಲ್ಲಿ ಬರಹಗಾರರು ಏನು ಹೇಳುತ್ತಾರೆ?**

________________________________________

________________________________________

ಈ ವಚನಗಳು ಬಹಳ ಆಳವಾಗಿದ್ದರೂ ಕೂಡ ಅವು ಶ್ರೀಮಂತವಾಗಿವೆ, ಭೂಲೋಕದಲ್ಲಿ ಆರೋನನ ವಂಶದಿಂದ ಬಂದಂತಹ ಮಹಾ ಯಾಜಕರ ಸೇವೆಗಿಂತ ಯೇಸುವು ಪರಲೋಕದಲ್ಲಿ ಅದಕ್ಕಿಂತ ಹೆಚ್ಚಿನ ಮಹಾ ಯಾಜಕನ ಸೇವೆಯನ್ನು ಸಲ್ಲಿಸುತ್ತಿದ್ದಾನೆ. ಆದರೆ, ಭೂಮಿಯ ಮೇಲೆ ಭೂಲೋಕದ ಮಹಾಯಾಜಕತ್ವಕ್ಕಿಂತ, ಪರಲೋಕದಲ್ಲಿ ಸೇವೆ ಸಲ್ಲಿಸುತ್ತಿರುವ ಪರಲೋಕದ ಮಹಾ ಯಾಜಕತ್ವವು ನಮಗೆ ದೊರೆತಿದೆ. ಆದ್ದರಿಂದ, ನಾವು ಈಗ ಯೇಸುವಿನ ಮೇಲೆ ನಮ್ಮ ದೃಷ್ಟಿಯನ್ನು ಇಟ್ಟಾಗ, ಪರಲೋಕದಲ್ಲಿ ಆತನು ಸಲ್ಲಿಸುವ ಮಹಾ ಯಾಜಕನ ಪಾತ್ರವನ್ನು ನಾವು ಚೆನ್ನಾಗಿ ದೃಷ್ಟಿಸಬಹುದು.

**ಮಂಗಳವಾರ**

## ನಮ್ಮ ಮಹಾ ಯಾಜಕನು

**ಇಬ್ರಿಯ 7:24–27, 8:6 ನ್ನು ಓದಿರಿ. ಈ ವಚನಗಳಲ್ಲಿ ಯಾವ ಶ್ರೇಷ್ಠವಾದ ನಿರೀಕ್ಷೆಯನ್ನು ನೀಡಲಾಗಿದೆ?**

________________________________________

ಇತರ ಯಾವ ಮಹಾ ಯಾಜಕರು ಹೊಂದಿರದ ಹಲವು ಅರ್ಹತೆಗಳ ಮೂಲಕ ಆತನು ನಮ್ಮನ್ನು ಸಂಪೂರ್ಣವಾಗಿ ರಕ್ಷಿಸುವವನಾಗಿದ್ದಾನೆ. ಪಾಪಗಳನ್ನು ಕ್ಷಮಿಸುವ ಅಧಿಕಾರವನ್ನು ಹೊಂದಿರುವ ದೇವರು ಆತನು. ಆತನಿಗೆ ನಿರಂತರವಾದ ಯಾಜಕತ್ವವಿದೆ. ಕ್ರೈಸ್ತಿಯ ಕಾಲದಲ್ಲಿ ಆತನು ತನ್ನ ಜನರ ಪರವಾಗಿ ಎಲ್ಲಾ ಸಮಯದಲ್ಲಿ ವಿಜ್ಞಾಪನೆ ಮಾಡುತ್ತಿದ್ದಾನೆ, ಇದೇ ಕರುಣೆಯಿಂದ ಆತನು ಪಾಪಿಗಳಿಗೆ ರಕ್ಷಣೆಯನ್ನು ನೀಡುತ್ತಿದ್ದಾನೆ ಮತ್ತು ಒಂಟಿಯಾಗಿರುವವರಿಗೆ ಸಮಾಧಾನ ನೀಡುತ್ತಿದ್ದಾನೆ. ಆತನು ಮಾನವನೂ ಕೂಡ ಆಗಿದ್ದಾನೆ ಆದರೆ ಪಾಪವಿಲ್ಲದೆ ಹುಟ್ಟಿ ಆದೆ ಸ್ಥಿತಿಯಲ್ಲಿ ಉಳಿದಿದ್ದಾನೆ. ಮತ್ತು, ಪಾಪವಿಲ್ಲದ ಆತನು ಮಾನವರ ಪಾಪದ ಹೊರೆಯನ್ನು ಹೊತ್ತುಕೊಂಡು ಸತ್ತನು. ಇದರಿಂದ ಆತನು ದೇವ–ಮಾನವನಾದ ಆತನು ಮಾತ್ರ ಪರಲೋಕದ ಗುಡಾರದಲ್ಲಿ ಪಾಪಿಗಳ ಪರವಾಗಿ ವಿಜ್ಞಾಪಣೆ ಮಾಡಲು ಆರ್ಹತೆ ಹೊಂದಿದ್ದಾನೆ.

ಆತನು ಶಿಲುಬೆಯ ಮೇಲೆ ಮಾಡಿದ ಈ ತ್ಯಾಗದ ಫಲವಾಗಿ ಇಂತಹ ಬಲಿದಾನ ಹೇಗೆ ಪಾಪಿಗಳ ಎಲ್ಲಾ ಪಾಪಗಳನ್ನು ಕ್ಷಮಿಸಲು ಹೇಗೆ ಅರ್ಹತೆಯನ್ನು ಹೊಂದುವುದಿಲ್ಲ?

**ಇಬ್ರಿಯರಿಗೆ 9:11–15 ನ್ನು ಓದಿರಿ. ಆತನ ಮರಣದ ಮೂಲಕ ಮತ್ತು ಈಗ ಆತನ ಪರಲೋಕದಲ್ಲಿ ಸಲ್ಲಿಸುತ್ತಿರುವ ಸೇವೆಯ ಮೂಲಕ ಆತನು ನಮಗಾಗಿ ಏನು ಸಾಧಿಸಿದ್ದಾನೆ?**

ಇಬ್ರಿಯರಿಗೆ 9:12 ಹೇಳುವ ಪ್ರಕಾರ ಕ್ರಿಸ್ತನು ನಿತ್ಯವಾದ ವಿಮೋಚನೆಯನ್ನು ಸಂಪಾದಿಸಿದ್ದಾನೆ ವಿಮೋಚನೆ ಎಂಬ ಪದದ ಗ್ರೀಕ್ ಭಾಷಾಂತರದ ಪದದ ಮತ್ತೊಂದು ಅರ್ಥ ಬಿಡಿಸುವುದು, ಬಿಡುಗಡೆ ಮಾಡುವುದು ಮತ್ತು ವಿಮೋಚನೆ ಎಂದು ಹೇಳಬಹುದು. ಇದು ಲೂಕ 1:68 ರಲ್ಲಿ ಜೆಕರ್ಯನು ದೇವರು

ನಮ್ಮನ್ನು ಸಂದರ್ಶಿಸಿ ಮತ್ತು ನಮ್ಮನ್ನು ವಿಮೋಚನೆಗೊಳಿಸಿದ್ದಾನೆ. ಎಂದು ಹೇಳುವ ವಾಕ್ಯದಲ್ಲಿ ಉಪಯೋಗಿಸಿರುವ ಪದವಾಗಿದೆ. ಇದರ ಅರ್ಥವೆಂದರೆ ಯೇಸುವಿನ ರಕ್ತ ಅದು ಮಾತ್ರ ಸಾಕು ಅಂದರೆ ಕ್ರಿಸ್ತನು ಯಾರು, ಬಲಿದಾನದ ಕುರಿಮರಿಯಾಗಿ ವಿಮೋಚನೆಯನ್ನು ನಮಗಾಗಿ ಸಂಪಾದಿಸಿದನು. ಮತ್ತು ಸುವಾರ್ತೆಯ ಶ್ರೇಷ್ಠವಾದ ಸುದ್ದಿಯೆಂದರೆ ಯೇಸುವು ಇದನ್ನು ನಮಗಾಗಿ ಸಂಪಾದಿಸಿದ್ದಾನೆ, ಆತನಿಗಾಗಿ ಅಲ್ಲದೆ ಆತನನ್ನು ತಮ್ಮ ರಕ್ಷಕನನ್ನಾಗಿ ಅಂಗಿಕರಿಸುವ ಪ್ರತಿಯೊಬ್ಬರಿಗೂ ಕೂಡ ಆತನು ಇದನ್ನು ನೀಡುವವನಾಗಿದ್ದಾನೆ.

**ಯೇಸುವು ನಮಗಾಗಿ ನಿತ್ಯ ವಿಮೋಚನೆಯನ್ನು ಸಂಪಾದಿಸಿದ್ದಾನೆ ಈ ವಾಕ್ಯದ ಕುರಿತಾಗಿ ಆಲೋಚಿಸಿರಿ ಮತ್ತು ಈ ಕಾರ್ಯವನ್ನು ಸಂಪೂರ್ಣಗೊಳಿಸಿದ ನಂತರ ಮಾತ್ರ ಆತನು ನಮ್ಮ ಪರವಾಗಿ ಪರಲೋಕದ ಗುಡಾರದಲ್ಲಿ ಪ್ರವೇಶ ಮಾಡಿದನು. ಪರಲೋಕದಲ್ಲಿ ಯೇಸುವು ನಮಗಾಗಿ ಸಲ್ಲಿಸುತ್ತಿರುವ ಈ ಸೇವೆಯು ನಮಗೆ ಯಾವ ರೀತಿಯ ನಿರೀಕ್ಷೆಯನ್ನು ನೀಡುತ್ತದೆ?**

ಬುಧವಾರ

## ನಮ್ಮ ಮದ್ಯಸ್ಥಕನು

ಪಾಪವು ಮಾನವನ ಮತ್ತು ದೇವರ ನಡುವೆ ಆಳವಾದ ಬೇರ್ಪಡಿಸುವಿಕೆಯನ್ನು ತಂದರೂ ಕೂಡ ಕ್ರಿಸ್ತನ ಬಲಿದಾನದ ಮರಣವು ಮನುಷ್ಯರಾಗಿ ನಮ್ಮನ್ನು ಮತ್ತು ದೇವರ ಜೊತೆಗೆ ನಿತ್ಯ ಸಂಪರ್ಕದಲ್ಲಿರುವಂತೆ ಮಾಡಿದೆ. ಎಫೆಸ 2:18, 1 ಪೇತ್ರನು 3:18 ನ್ನು ಕೂಡ ಓದಿರಿ. **"ಈ ಆಧಾರಗಳನ್ನು ಕೊಟ್ಟಿದ್ದರಲ್ಲಿ ದೇವರು ಸುಳ್ಳಾಡಿರಲಾರನು. ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು ಭರವಸಕ್ಕೆ ಯೋಗ್ಯವಾದದ್ದೂ ಸ್ಥಿರವಾದದ್ದೂ ಆಗಿದೆ. ಅದು**

**ತೆರೆಯೋಳಗಣ ದೇವ ಸಾನ್ನಿದ್ಯವನ್ನು ಪ್ರವೇಶಿಸುವಂಥದು. ಯೇಸು ಸದಾಕಾಲವೂ ಮೇಲ್ಕಿಜೆದೆಕನ ತರಹದ ಮಹಾಯಾಜಕನಾಗಿದ್ದು ನಮಗೋಸ್ಕರ ಮುಂದಾಗಿ ಹೋಗಿ ಆ ಸಾನ್ನಿಧ್ಯವನ್ನು ಪ್ರವೇಶಿಸಿದ್ದಾನೆ.** (ಇಬ್ರಿಯರಿಗೆ 6:19,20)

___________________________________________

___________________________________________

**ಇಬ್ರಿಯರಿಗೆ 9:24 ನ್ನು ಓದಿರಿ. ಈ ವಚನದ ಪ್ರಕಾರ ಯಾವ ಕೆಲಸವನ್ನು ಕ್ರಿಸ್ತನು ಮಾಡುತ್ತಿದ್ದಾನೆ?**

___________________________________________

___________________________________________

ಯೇಸುವು ನಮ್ಮ ಪ್ರತಿನಿಧಿಯಾಗಿದ್ದಾನೆ ಆದ್ದರಿಂದ ಆತನು ನಮ್ಮ ಪರವಾಗಿ ಪರಲೋಕದ ಗುಡಾರದೊಳಗೆ ಅಂದರೆ ನಮಗಾಗಿ ದೇವರ ಸನ್ನಿಧಿಯೊಳಗೆ ಪ್ರವೇಶಿಸಿದ್ದಾನೆ. ಅಂದರೆ, ಯೇಸುವು ತಂದೆಯ ಮುಂದೆ ನಿಂತುಕೊಂಡು, ತನ್ನ ಅರ್ಹತೆಗಳ ಮೂಲಕ ನಿತ್ಯವಾದ ವಿಮೊಚನೆಯನ್ನು ನಮ್ಮ ಪರವಾಗಿ ಪಡೆದಿದ್ದಾನೆ.

ಹೌದು, ನಾವು ಕ್ರಿಸ್ತನನ್ನು ಅಂಗಿಕರಿಸಿದಾಗ ನಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ, ಮತ್ತು ನಾವು ದೇವರ ಮುಂದೆ ನಿರ್ದೋಷಿಗಳು ಮತ್ತು ಶುದ್ದರಾಗಿ ನಿಲ್ಲುತ್ತೇವೆ. ಆದರೆ, ನಾವು ಕ್ರೈಸ್ತರಾದ ಮೇಲೂ ಕೂಡ, ಪಾಪದ ಮೇಲೆ ಜಯದ ಎಲ್ಲಾ ವಾಗ್ದಾನಗಳ ಹೊರೆತಾಗಿಯೂ ಕೂಡ ನಾವು ಕೆಲವು ಬಾರಿ ಪಾಪವನ್ನು ಮಾಡುತ್ತೇವೆ. ಅಂತಹ ಸಂಧರ್ಭಗಳಲ್ಲಿ ಯೇಸುವು ನಮ್ಮ ಪರವಾಗಿ ಪರಲೋಕದಲ್ಲಿ ಮಧ್ಯಸ್ಥಿಕೆ ವಹಿಸುತ್ತಾನೆ. ಪಶ್ಚಾತ್ತಾಪ ಹೊಂದಿದ ಪಾಪಿಯ ಪರವಾಗಿ ಆತನು ನಿಲ್ಲುತ್ತಾನೆ, ಆತನು ನಮ್ಮ ಅರ್ಹತೆಗಳ ಆಧಾರದ ಮೇಲೆ (ನಮ್ಮಲ್ಲಿ ಯಾವುದೇ ಅರ್ಹತೆಗಳಿಲ್ಲ) ಅಲ್ಲದೆ ಆತನ ಸ್ವಂತ ಅರ್ಹತೆಯ ಆಧಾರದ ಮೇಲೆ ವಾದ ಮಾಡುತ್ತಾನೆ. ಆದಕಾರಣ ಆತನು ತನ್ನ ಮೂಲಕ

ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತನಾಗಿದ್ದಾನೆ. ಅವರಿಗೋಸ್ಕರ ವಿಜ್ಞಾಪನೆ ಮಾಡುವುದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ. (ಇಬ್ರಿಯರಿಗೆ 7:25)

**ಹೊಸದಾಗಿ ಹುಟ್ಟಿದ ಅನುಭವವನ್ನು ಹೊಂದಿರುವ ಕ್ರೈಸ್ತವನು ಕ್ರಿಸ್ತನ ನಿರಂತರ ಕೃಪೆ ಮತ್ತು ಕರುಣೆಯನ್ನು ತನ್ನ ಅವಶ್ಯಕತೆ ಎಂದು ಭಾವಿಸದೆ ಹೋದರೆ ಏನಾಗುತ್ತದೆ? ಯೇಸುವಿನಲ್ಲಿ ನಮಗಿರುವ ಜೀವನದ ಹೊರೆತಾಗಿ ನಮ್ಮ ಜೀವನದಲ್ಲಿ ಬಂದಿರುವ ಅದ್ಭುತವಾದ ಬದಲಾವಣೆಯ ಹೊರೆತಾಗಿ ತನ್ನ ಜೀವನದಲ್ಲಿ ನಿರಂತರವಾದ ಕ್ಷಮಾಪನೆಯನ್ನು ಯಾರು ತಾನೇ ಗ್ರಹಿಸುವುದಿಲ್ಲ? ಹಾಗಾದರೆ ಯೇಸುವು ನಮ್ಮ ಮಹಾ ಯಾಜಕನು ಎಂಬ ಜ್ಞಾನವು ಯಾಕೆ ಅಷ್ಟು ಪ್ರಾಮುಖ್ಯವಾದದ್ದು?**

**ಗುರುವಾರ**

## ದೋಷ ಪರಿಹಾರಕ ದಿನ

ಭೂಲೋಕದ ಗುಡಾರವು ಪರಲೋಕ ಗುಡಾರದ ಒಂದು ಮಾದರಿಯೆಂದು ಇಬ್ರಿಯರ ಪುಸ್ತಕ ತಿಳಿಸುತ್ತದೆ, ಇದರಲ್ಲಿ ನಮ್ಮ ರಕ್ಷಕನಾದ ಯೇಸುವು ಪ್ರವೇಶಿಸಿ ನಮ್ಮ ಮಹಾ ಯಾಜಕನಾಗಿ ವಿಜ್ಞಾಪನೆ ಮಾಡುತ್ತಿದ್ದಾನೆ. ಭೂಲೋಕದ ಗುಡಾರದ ಸೇವೆಯಲ್ಲಿ ಎರಡು ಭಾಗಗಳು, ಬಲಿದಾನಗಳು ಮತ್ತು ಶುದ್ಧೀಕರಣದ ಕಾರ್ಯಗಳು ಅವರು ಪರಲೋಕದಲ್ಲಿರುವ ದೇವಾಲಯದ ಪ್ರತಿರೂಪವೂ ಛಾಯೆಯೂ ಆಗಿರುವ ಆಲಯದಲ್ಲಿ ಯಾಜಕತ್ವವನ್ನು ನಡಿಸುವವರು. (ಇಬ್ರಿಯರಿಗೆ 8:5.).

ಭೂಲೋಕದ ಗುಡಾರದಲ್ಲಿ ಯಾವ ರೀತಿಯ ಭಾಗಗಳು ಮತ್ತು ಆಚರಣೆಗಳು ಮತ್ತು ಪರಿಶುದ್ದ ಮತ್ತು ಅತೀ ಪರಿಶುದ್ದ ಸ್ಥಳಗಳು ಇರುವ ರೀತಿಯಲ್ಲೆ ಪರಲೋಕದಲ್ಲಿಯೂ ಕೂಡ ಕ್ರಿಸ್ತನ ಅದೇ ರೀತಿಯ ಸೇವೆಯನ್ನು ಮಾಡುತ್ತಿದ್ದಾನೆ. ಭೂಲೋಕದ ಗುಡಾರದಲ್ಲಿ ನ್ಯಾಯವಿಚಾರಣೆಯ ಅಂಶವನ್ನು ದೋಷಪರಿಹಾರಕ

ದಿನದ ಮೂಲಕ ತೋರಿಸಲಾಗಿದೆ. ಯಾಜಕಕಾಂಡ 16 ರಲ್ಲಿ ಹೇಳಲಾಗಿರುವ ಗುಡಾರದ ಶುದ್ಧೀಕರಣವೂ ಕೂಡ ಸೇರಿದೆ. ಈ ಸಮಯದಲ್ಲಿ ವರ್ಷಕ್ಕೆ ಒಮ್ಮೆ ಮಾತ್ರ ಮಹಾ ಯಾಜಕನು ಮಹಾ ಪರಿಶುದ್ದ ಸ್ಥಳಕ್ಕೆ ಪ್ರವೇಶ ಮಾಡುತ್ತಾನೆ. (ಯಾಜಕಕಾಂಡ 16:12–14) ಜನರ ಪರವಾಗಿ ಗುಡಾರದ ಶುದ್ದೀಕರಣವನ್ನು ಮಾಡುತ್ತಾನೆ.

**ಇಬ್ರಿಯರಿಗೆ 9:20–23 ನ್ನು ಓದಿರಿ. ಯಾವುದು ಶುದ್ದೀಕರಣ ಮತ್ತು ಪವಿತ್ರತೆಯ ಅವಶ್ಯಕತೆಯನ್ನು ಹೊಂದಿದೆ ಮತ್ತು ಇದು ಯಾವ ರೀತಿಯಲ್ಲಿ ದೋಷ ಪರಿಹಾರಕ ದಿನದಲ್ಲಿ ಕ್ರಿಸ್ತನು ಮಾಡುವ ಸೇವೆಯನ್ನು ಕುರಿತಾಗಿ ಹೇಳುತ್ತದೆ?**

______________________________

______________________________

ಪರಲೋಕದ ಗುಡಾರವು ಕೂಡ ಪರಿಶುದ್ದ ಹಾಗೂ ಶುದ್ದೀಕರಣ ಹೊಂದಬೇಕು ಎಂಬ ವ್ಯಾಖ್ಯಾನವನ್ನು ಅನೇಕ ಸತ್ಯವೇದ ಪಂಡಿತರು ಅಚ್ಚರಿಯಿಂದ ನೋಡುತ್ತಾರೆ. ಇದನ್ನು ದೋಷ ಪರಿಹಾರಕ ದಿನದ ಹಿನ್ನಲೆಯಲ್ಲಿ ಅರ್ಥ ಮಾಡಿಕೊಂಡರೆ ಸಮಸ್ಯೆಯು ಪರಿಹಾರವಾಗುತ್ತದೆ. ಇಬ್ರಿಯರಿಗೆ 9:23 ತೋರಿಸುವ ಹಾಗೆ ಪರಲೋಕದಲ್ಲಿ ಯೇಸುವು ಮಾಡುವ ಕಾರ್ಯವು ಭೂಲೋಕದಲ್ಲಿ ದೋಷ ಪರಿಹಾರಕ ದಿನದಲ್ಲಿ ಮಹಾ ಯಾಜಕನು ಮಾಡುವ ಕಾರ್ಯದ ಛಾಯೆಯರೂಪದಲ್ಲಿದೆ. ದೋಷ ಪರಿಹಾರಕ ದಿನದಲ್ಲಿ ಭೂಲೋಕದಲ್ಲಿ ಮಹಾ ಯಾಜಕನು ಮಾಡುವ ಕಾರ್ಯವು ಪರಲೋಕದಲ್ಲಿ ಯೇಸುವು ಮಾಡುವ ಕಾರ್ಯಕ್ಕೆ ಮಾದರಿಯಾಗಿದೆ. ಈ ವಚನವು ಯೇಸುವು ಪರಲೋಕಕ್ಕೆ ಆರೋಹಣನಾದ ತಕ್ಷಣ ಆತನು ಈ ಆರಂಭಿಸಿದನು ಎಂದು ಹೇಳುವುದಿಲ್ಲ. ದಾನಿಯೇಲನ ಪುಸ್ತಕದ ಅಧ್ಯಯನದ ನಂತರ ಈ ಹಂತದ ಸೇವೆಯು 1844 ರಲ್ಲಿ ಪ್ರಾರಂಭವಾಯಿತು ಎಂದು ಹೇಳಬಹುದು. ಆದ್ದರಿಂದ ಕೊನೆಯ ದಿನಗಳನ್ನು ಎದುರಿಸುವ ಕ್ರೈಸ್ತರು ನಾವು ಜೀವಿಸುತ್ತಿರುವ ಸಮಯದ ವಿಶೇಷತೆಯನ್ನು

ಗಮನಿಸಬೇಕು ಮತ್ತು ಕ್ರಿಸ್ತನು ನಮಗಾಗಿ ಈ ಹಿಂದೆ ಮಾಡಿರುವ ಕಾರ್ಯವನ್ನು ಮತ್ತು ಈಗ ಪರಲೋಕದ ಮಹಾ ಪರಿಶುದ್ದ ಸ್ಥಳದಲ್ಲಿ ಮಾಡುತ್ತಿರುವ ಕಾರ್ಯದಲ್ಲಿ ಭರವಸೆಯನ್ನು ಹೊಂದಬೇಕು.

**ಮೊದಲನೇಯ ದೂತನ ಸಂದೇಶವು ಹೇಳುವ ಪ್ರಕಾರ ದೇವರಿಗೆ ಭಯಪಟ್ಟು ಆತನಿಗೆ ಮಹಿಮೆಯನ್ನು ಸಲ್ಲಿಸಿರಿ,ಯಾಕೆಂದರೆ ಆತನು ನ್ಯಾಯವಿಚಾರಣೆ ಮಾಡುವು ಸಮಯವೂ ಸಮೀಪಿಸಿದೆ (ಪ್ರಕಟಣೆ 14:7). ನ್ಯಾಯ ವಿಚಾರಣೆಯ ವಿಷಯವು ಕೊನೆಯ ಕಾಲವು ಸಮೀಪಿಸಿದೆ ಎಂಬ ವಿಷಯವನ್ನು ತಿಳಿಸುತ್ತದೆ. ಈ ವಾಸ್ತವತೆಯು ನಮ್ಮನ್ನು ಹೇಗೆ ಪ್ರಭಾವಗೊಳಿಸಬೇಕು?**

**ಶುಕ್ರವಾರ**

**ಮುಂದಿನ ಆಲೋಚನೆ :** ಇಬ್ರಿಯರ ಪುಸ್ತಕವು ಭೂಲೋಕದ ಗುಡಾರವನ್ನು ಮಾದರಿಯಾಗಿ ತೋರಿಸುತ್ತದೆ, ಇದರಲ್ಲಿ ಕ್ರಿಸ್ತನು ಪರಲೋಕದಲ್ಲಿ ಮತ್ತು ಭೂಲೋಕದಲ್ಲಿ ಮಾಡುವ ಸೇವೆಯನ್ನು ಭೂಲೋಕದಲ್ಲಿ ನಮ್ಮ ಪರವಾಗಿ ಮಾಡುವ ತ್ಯಾಗವನ್ನು ಮತ್ತು ಪರಲೋಕದಲ್ಲಿ ಸಲ್ಲಿಸುವ ಸೇವೆಯನ್ನು ತೋರಿಸುತ್ತದೆ. ಇಸ್ರಾಯೇಲ್ಯರ ಗುಡಾರದ ಸೇವೆಯು ಯಾವಾಗಲೂ ಕೂಡ ಸುವಾರ್ತೆಯ ಛಾಯೆಯಾಗಿತ್ತು. ಅದು ಯೆಹೂದ್ಯರಿಗೆ ಸುವಾರ್ತೆಯನ್ನು ತಿಳಿಸುವ ವಿಧಾನವಾಗಿತ್ತು, ಇದರಲ್ಲಿ ಬಲಿದಾನಗಳು, ಮಧ್ಯಸ್ಥಿಕೆ ನ್ಯಾಯ ವಿಚಾರಣೆ ಮತ್ತು ಪಾಪದ ಅಂತ್ಯವನ್ನು ತೋರಿಸುತ್ತಿತ್ತು. ದಾನಿಯೇಲನ ಪುಸ್ತಕವು ಇದಕ್ಕೆ ಹೆಚ್ಚಿನ ಅರ್ಥವನ್ನು ಸೇರಿಸುತ್ತದೆ ಈ ಪುಸ್ತಕವು ಯೇಸುವು ಕೊನೆಯ ಕಾಲದಲ್ಲಿ ತನ್ನ ಜನರ ಪರವಾಗಿ ಪರಲೋಕದ ಗುಡಾರದಲ್ಲಿ ಸಲ್ಲಿಸುವ ಸೇವೆಯನ್ನು ವಿವರಿಸುತ್ತದೆ. ಶುದ್ಧೀಕರಣ ನ್ಯಾಯ ವಿಚಾರಣೆ, ಮತ್ತು ದೋಷಪರಿಹಾರ, ಈ ವಿಷಯಗಳ ಮೇಲೆ ಹೆಚ್ಚಿನ ಒತ್ತು ನೀಡುವ ಮೂಲಕ ದಾನಿಯೇಲನ ಕೊನೆಯ ಕಾಲದ ಪ್ರವಾದನೆಗಳು ಲೋಕದ ಕೊನೆಯ ಕಾಲದ ದಿನಗಳ ಚಿತ್ರಣವನ್ನು ನೀಡುತ್ತವೆ. ಶುದ್ಧೀಕರಣವು ಪರಲೋಕಕ್ಕೆ ನೇರವಾಗಿ ಸಂಬಂಧವನ್ನು ಹೊಂದಿದ್ದು

ಕ್ರಿಸ್ತನು ರಾಜನಾಗಿ ಮತ್ತು ಮಹಾ ಯಾಜಕನಾಗಿ ಮಾಡುವ ಸೇವೆಯನ್ನು ಸೂಚಿಸುತ್ತದೆ. ದರ್ಶನವು ಸಮಯದ ವಿಷಯವನ್ನು, ತಿಳಿಸುವುದರ ಮೂಲಕ ಓದುಗರು ರಕ್ಷಣೆಯ ಚರಿತ್ರೆಯನ್ನು ಅರ್ಥ ಮಾಡಿಕೊಂಡು ಮೆಸ್ಸಿಯನು ಕೊನೆಯ ಶುದ್ದೀಕರಣ,ನ್ಯಾಯ ವಿಚಾರಣೆ ಮತ್ತು ದೋಷ ಪರಿಹಾರವನ್ನು ಪರಲೋಕದ ಗುಡಾರದಲ್ಲಿ ಮಾಡುವ ಸೇವೆಯನ್ನು ಗ್ರಹಿಸುವುದಕ್ಕೆ ಸಹಾಯ ಮಾಡುತ್ತದೆ. **ಹ್ಯಾಂಡ್ ಬುಕ್ ಆಫ್ ಸೇವೆಂತ್ ಡೇ ಅಡ್ವೆಂಟಿಸ್ಟ್ ಥಿಯಾಲಜಿ, ಪುಟ 394.**

## ಚರ್ಚಿಸಬೇಕಾದ ಪ್ರಶ್ನೆಗಳು

1. ಎಲೆನ್ ಜಿ ವೈಟ್ ಮ್ಮನವರು ಮಾಡಿರುವ ವ್ಯಾಖ್ಯಾನದ ಒಂದು ಭಾಗವನ್ನು ನೋಡಿರಿ ಭೂಲೋಕದಲ್ಲಿ ಪಾಪಗಳನ್ನು ನಂಬಿಕೆಯ ಮೂಲಕ ಬಲಿದಾನದ ಮೂಲಕ ಗುಡಾರದೊಳಗೆ ಹೇಗೆ ಸೇರಿಸಲಾಗುತ್ತಿತ್ತೋ, ಹಾಗೆಯೇ ಹೊಸ ಒಡಂಬಡಿಕೆಯ ವಾಗ್ದಾನದಲ್ಲಿ ಪಾಪಗಳನ್ನು ಕ್ರಿಸ್ತನ ಮೇಲೆ ಹೊರೆಸಿ ಅವುಗಳನ್ನು ಪರಲೋಕದ ಗುಡಾರದಲ್ಲಿ ಸೇರಿಸಲಾಗುತ್ತಿದೆ. ಭೂಲೋಕದಲ್ಲಿ ಪಾಪಗಳನ್ನು ಶುದ್ದೀಕರಣದ ಮೂಲಕ ಹೇಗೆ ದೋಷ ಪರಿಹಾರಕ ದಿನದಲ್ಲಿ ಹೇಗೆ ಪವಿತ್ರಗೋಳಿಸಲಾಗುತ್ತಿತ್ತೋ ಅದೇ ರೀತಿಯಲ್ಲಿ ಪರಲೋಕದ ಗುಡಾರವನ್ನು ಮತ್ತು ಅಲ್ಲಿರುವ ಪಾಪದ ಸಂಗ್ರಹದ ಪುಸ್ತಕಗಳನ್ನು ಕೂಡ ಕ್ರಿಸ್ತನ ಸೇವೆಯ ಮೂಲಕ ಶುದ್ದೀಕರಣಗೋಳಿಸಲಾಗುತ್ತದೆ. ಆದರೆ ಇದನ್ನು ಸಾಧಿಸುವ ಮುನ್ನ ಅಲ್ಲಿರುವ ಪುಸ್ತಕಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ ಯಾರು ಕ್ಷಮಾಪಣೆಯ ಮೂಲಕ ಕ್ರಿಸ್ತನ ಶುದ್ದೀಕರಣ ಮತ್ತು ಆತನ ಅರ್ಹತೆಯನ್ನು ಪಡೆಯುವರು ಎಂದು ಪರಿಶೀಲನೆ ನಡೆಸಲಾಗುತ್ತದೆ. ಮಹಾ ಹೋರಾಟ ಪುಟ 421, 422. ಆತನ ಶುದ್ದೀಕರಣ ಮತ್ತು ಆತನ ಅರ್ಹತೆಯ ಫಲವನ್ನು ಯಾರು ಹೊಂದುವರು ಎಂಬ ಆಕೆಯ ವಾಕ್ಯದ ಅರ್ಥವೇನು? ಕೊನೆಯ ಕಾಲದ ಹಿನ್ನಲೆಯಲ್ಲಿ ಈ ಮಾತಿನ ಅರ್ಥವನ್ನು ಗ್ರಹಿಸುವುದು ಯಾಕೆ ಬಹಳ ಮುಖ್ಯವಾಗಿದೆ.

2. ಯಾಜಕಕಾಂಡ 16:15,16 ನ್ನು ಓದಿರಿ. ರಕ್ತದ ಪ್ರಾಮುಖ್ಯತೆಯೇನು?ರಕ್ತವು ಯಾವುದನ್ನು ಸೂಚಿಸುತ್ತದೆ? ಹಿಂದಿನ ಕಾಲದಲ್ಲಿ ದೋಷಪರಿಹಾರಕ ದಿನದಲ್ಲಿ ರಕ್ತವು ಎಷ್ಟು ಪ್ರಾಧಾನ್ಯವಾದದ್ದು ಮತ್ತು ಇಂದಿನ ದಿನಗಳಲ್ಲಿ ಅದು ಎಷ್ಟು ಪ್ರಾಮುಖ್ಯವಾಗಿದೆ.